-643-

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿತ್ರದುರ್ಗದಲ್ಲಿ ಸಿಎಂಒ ಕಛೇರಿ ಹಾಗೂ ಲೋ.ಇ ಸ್ಟೋರ್ ಯಾರ್ಡ್ ಅನ್ನು ಭದ್ರಾ ಮೇಲ್ದಂಡೆ ಯೋಜನಾ ವಲಯ ಚಿತ್ರದುರ್ಗ ಕಛೇರಿಗೆ ಹಸ್ತಾಂತರಿಸುವ ಬಗ್ಗೆ.

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು(ದಕ್ಷಿಣ), ಬೆಂಗಳೂರು, ಇವರ ಪತ್ರಸಂಖ್ಯೆ: ಮುಅ/ಸಂಕದ/ಎಇ-4/07-08, ದಿನಾಂಕ: 30-1-2008.

----

**ಪ್ರಸ್ತಾವನೆ:**

ಕರ್ನಾಟಕ ನೀರಾವರಿ ನಿಗಮ ನಿಯಮಿತ ಭದ್ರಾ ಮೇಲ್ದಂಡೆ ಯೋಜನಾ ವಲಯ, ಚಿತ್ರದುರ್ಗ ಇವರು ಚಿತ್ರದುರ್ಗದಲ್ಲಿರುವ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸಂಬಂಧಿಸಿದ ಸಿಎಂಒ ಕಛೇರಿ ಕಟ್ಟಡ ಹಾಗೂ ಲೋ.ಇ ಸ್ಟೋರ್ ಯಾರ್ಡ್ ಹಾಗೂ ಖಾಲಿ ಇರುವ ನಿವೇಶನವನ್ನು ಭದ್ರಾ ಮೇಲ್ದಂಡೆ ಯೋಜನಾ ವಲಯದ ಕಾರ್ಯಾಲಯಗಳ ಸಂಕೀರ್ಣ ಕಟ್ಟಡಗಳನ್ನು ನಿರ್ಮಿಸಲು ಹಸ್ತಾಂತರಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿರುತ್ತದೆ. ಅದರಂತೆ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಸಿಎಂಒ ಕಛೇರಿ ಕಟ್ಟಡ ಮತ್ತು ಸ್ಟೋರ್ ಯಾರ್ಡ್ ಹಾಗೂ ಖಾಲಿ ಇರುವ ನಿವೇಶನವು ಲೋಕೋಪಯೋಗಿ ಇಲಾಖೆಯ ಕಟ್ಟಡಗಳಿಗೆ ಹೊಂದಿಕೊಂಡಿದ್ದು, ಸಿಎಂಒ ಕಛೇರಿ ಮತ್ತು ಸ್ಟೋರ್ ಯಾರ್ಡ್ ಕಟ್ಟಡಗಳನ್ನು ಹಾಗೂ ಖಾಲಿ ನಿವೇಶನವನ್ನು ಉಪಯೋಗಿಸದೇ ಇರುವುದರಿಂದ, ಸದರಿ ಸಿಎಂಒ ಕಛೇರಿ ಮತ್ತು ಸ್ಟೋರ್ ಯಾರ್ಡ್ ಕಟ್ಟಡ ಹಾಗೂ ಖಾಲಿ ನಿವೇಶನ ಒಳಗೊಂಡಂತೆ ಸುಮಾರು 2,964 ಚ.ಮೀ. ಜಾಗವನ್ನು ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಭದ್ರಾ ಮೇಲ್ದಂಡೆ ಯೋಜನಾ ವಲಯದ ಕಾರ್ಯಾಲಯಗಳ ಸಂಕೀರ್ಣ ಕಟ್ಟಡಗಳನ್ನು ನಿರ್ಮಿಸಲು ಹಸ್ತಾಂತರಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ 34 ಬಿಎಂಎಸ್ 2008, ಬೆಂಗಳೂರು, ದಿನಾಂಕ: 17-4-2008**

ಚಿತ್ರದುರ್ಗದಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಸಿಎಂಒ ಕಛೇರಿ ಕಟ್ಟಡ ಮತ್ತು ಸ್ಟೋರ್ ಯಾರ್ಡ್ ಕಟ್ಟಡಗಳು ಹಾಗೂ ಖಾಲಿ ನಿವೇಶನ ಹೊಂದಿಕೊಂಡಂತೆ ಇರುವ ಸುಮಾರು 2,964 ಚ.ಮೀ. ಜಾಗವನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರ ಅಡಿಯಲ್ಲಿ ಬರುವ ಭದ್ರಾ ಮೇಲ್ದಂಡೆ ಯೋಜನಾ ವಲಯದ ಕಾರ್ಯಾಲಯಗಳ ಸಂಕೀರ್ಣ ಕಟ್ಟಡಗಳನ್ನು ನಿರ್ಮಿಸುವ ಸಲುವಾಗಿ ಜಲಸಂಪನ್ಮೂಲ ಇಲಾಖೆಗೆ ಹಸ್ತಾಂತರಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ರಹಮತ್ ಉಲ್ಲಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ(ಕಟ್ಟಡಗಳು)

17.4.08

**ಪ್ರತಿ:-**

1) ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು.

..2

ಸಂಖ್ಯೆ 401 ದಿನಾಂಕ 19.04.08
ಉಪಕಾರ್ಯದರ್ಶಿ (ಕಬಿಜೆಎನ್) ...

# ಕರ್ನಾಟಕ ಸರ್ಕಾರ

ಸಂ:ಜಸಂಇ 152 ವಿಬ್ಯಾಇ 2004(ಪಿ-1)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:23-04-2008.

ಇಂದ,

ಸರ್ಕಾರದ ಕಾರ್ಯದರ್ಶಿಗಳು,
ಜಲ ಸಂಪನ್ಮೂಲ ಇಲಾಖೆ,
ಬೆಂಗಳೂರು - 560001.

ಇವರಿಗೆ,

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಕಾಫಿ ಬೋರ್ಡ್ ಕಟ್ಟಡ,
ಬೆಂಗಳೂರು.

24 APR 2008

ಮಾನ್ಯರೆ,

ವಿಷಯ:-ಚಿತ್ರದುರ್ಗದಲ್ಲಿ ಸಿಎಂಒ ಕಛೇರಿ ಹಾಗೂ ಲೋ.ಇ ಸ್ಟೋರ್ ಯಾರ್ಡ್ ಅನ್ನು ಭದ್ರಾ ಮೇಲ್ದಂಡೆ ಯೋಜನಾ ವಲಯ ಚಿತ್ರದುರ್ಗ ಕಛೇರಿಗೆ ಹಸ್ತಾಂತರಿಸುವ ಬಗ್ಗೆ.

ಉಲ್ಲೇಖ:-ಸರ್ಕಾರದ ಆದೇಶ ಸಂಖ್ಯೆ:ಲೋಇ 34 ಬಿಎಂಎಸ್ 2008, ದಿನಾಂಕ:17-04-08.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಎಸ್.ಶ್ರೀಧರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ (ವಿಬ್ಯಾಯೋ)